ಒಂದಿಷ್ಟು ಕಣ್ಣೀರು ಸುರಿಸಿದಳು. ನಂತರ ಕೆಲವೇ ದಿನಗಳಲ್ಲಿ ತನ್ನ ವಿಧಿಗೆ ಹೊಂದಿಕೊಂಡು ಸಾಗಿ, ಆಕೆ ಅರ್ಧ ಡಜನ್ ಮಕ್ಕಳ ತಾಯಿಯಾದಳು.

ರಹೀಮಖಾನ ಕೂಡ ಮದುವೆಯಾದ. ಮದುವೆ ವಿಷಯದಲ್ಲಿ ಆಯ್ಕೆಯ ಅವಕಾಶ ಆತನಿಗಿರಲೇ ಇಲ್ಲ. ಆತನ ಪಾಲಕರು ಹುಡುಗಿಯನ್ನು ಆಯ್ಕೆ ಮಾಡಿದರು. ಲಗ್ನ ದಿನಾಂಕ ನಿಶ್ಚಯಿಸಿದರು. ಆತನಿಗಾಗಿ ಆಡಂಬರದ ಪೋಷಾಕು, ಆತನ ವಧುವಿಗಾಗಿ ಬೆಳ್ಳಿಯ ಆಭರಣಗಳನ್ನು ಖರೀದಿಸಿ, ಆತನನ್ನು ಕುದುರೆ ಮೇಲೆ ಕುಳ್ಳಿರಿಸಿ, ಬಾಜಾಭಜಂತ್ರಿಯೊಂದಿಗೆ ಹುಡುಗಿಯ ಮನೆಗೆ ಕರೆದೊಯ್ದರು. ಅಲ್ಲಿ ಶಾಸ್ತ್ರೋಕ್ತವಾಗಿ ನಿಕಾಹ ನೆರವೇರಿಸಲಾಯಿತು. ಖಾಜಿಯ ಔಪಚಾರಿಕ ಪ್ರಶ್ನೆಗಳಿಗೆ ರಹೀಮಖಾನ ಯಾಂತ್ರಿಕವಾಗಿ ತಲೆ ಅಲ್ಲಾಡಿಸಿದ. ಅಲ್ಲಿ ಬೇರಾವುದೇ ರಿವಾಜು ಅಸಾಧ್ಯವಾಗಿತ್ತು. ಕತ್ತಲೆ ತುಂಬಿದ್ದ ಒಂದು ಕೋಣೆಯಲ್ಲಿ, ತನ್ನ ವಿಧಿಯ ಬಗ್ಗೆ ಕಿಂಚಿತ್ತೂ ಅರಿವಿಲ್ಲದೆ, ನಾಚಿ ಕುಳಿತ ಓರ್ವ ಚಿಕ್ಕ ಮುಗ್ಧ ಹುಡುಗಿಯನ್ನು ಕೇಳುವವರಾರೂ ಅಲ್ಲಿರಲಿಲ್ಲ. ಮದುವೆ ಕಾರ್ಯಕ್ರಮ ಮುಗಿದ ಮೇಲೆ, ರಹೀಮಖಾನನ ತಂದೆ ತನ್ನ ಹೆಂಡತಿಯ ಎದುರು ಜಂಭ ಕೊಚ್ಚಿಕೊಂಡ, "ನೋಡು, ಅದೆಷ್ಟು ವಿಧೇಯನಾಗಿ ಆತ ನನ್ನ ಮಾತು ಪಾಲಿಸಿದ. ನಮ್ಮ ತೀರ್ಮಾನಗಳನ್ನು ಆತ ವಿರೋಧಿಸುತ್ತಾನೆಂದು ನೀನು ಹೆದರಿಕೊಂಡಿದ್ದೆ. ಈ ಯುವಕರ ಬಗ್ಗೆ ನನಗೆಲ್ಲ ಚೆನ್ನಾಗಿ ಗೊತ್ತಿದೆ. ಮದುವೆ ಮಾಡಲು ವಿಳಂಬ ಮಾಡಿದರೆ ಅವರು ತಮ್ಮ ಸಹನೆ ಕಳೆದುಕೊಳ್ಳುತ್ತಾರೆ. ಅದಕ್ಕಾಗಿ ನಮ್ಮ ಪೂರ್ವಜರು ತಮ್ಮ ಮಕ್ಕಳಿಗೆ ಬೇಗ ಮದುವೆ ಮಾಡಿ ಬಿಡುವುದರಲ್ಲೇ ನಂಬಿಕೆ ಇಟ್ಟುಕೊಂಡಿದ್ದರು. ಇನ್ನುಮುಂದೆ, ಆತ ಸರಿಹೋಗುವುದರಲ್ಲಿ ಸಂಶಯವೇ ಇಲ್ಲ."

ಆ ಕ್ಷಣದಲ್ಲಿ, ಒಂದು ಕುರಿ ಕಟುಕನಿಗಾಗಿ ದಾರಿ ಕಾಯುವಂತೆ, ಆತನ ಹೆಂಡತಿ ಆ ಕೋಣೆಯ ಹೊಸ್ತಿಲಲ್ಲಿ ನಿಂತು ದಾರಿ ಕಾಯುತ್ತಿದ್ದಳು. ತನ್ನ ಪಾಲಕರ ಮೇಲೆ, ಇಡೀ ಕುಟುಂಬದ ಮೇಲೆ ಹಾಗೂ ಇಡೀ ಸಮಾಜದ ಮೇಲೆ ಸೇಡು ತೀರಿಸಿಕೊಳ್ಳಲು ರಹೀಮಖಾನ ರುದ್ರಭೀಕರ ಆಲೋಚನೆ ಮಾಡಿದ್ದ. ತನ್ನ ಬದುಕಿನ ಕನಸುಗಳೆಲ್ಲ ನಿಷ್ಫಲವಾಗಲು ಅವರೆಲ್ಲರನ್ನು ಆತ ಹೊಣೆಗಾರರನ್ನಾಗಿ ಮಾಡಿದ್ದ.

ತನಗೊದಗಿದ ಈ ಎಲ್ಲ ಪೀಡೆಗೆ ತನ್ನ ವಧುವೇ ಕಾರಣಳು. ಹಾಗೆಂದು ಆತ ಅತಾರ್ಕಿಕವಾಗಿ ಭಾವಿಸಿದ. ತನ್ನೆಲ್ಲ ಸೇಡನ್ನು ಆತ ಅವಳ ಮೇಲೇ ತೀರಿಸಿಕೊಳ್ಳಬಯಸಿದ. ಅದುವರೆಗಿನ ಆತನ ಮೃದು ಮನಸ್ಸಿನಲ್ಲಿ ಕಬ್ಬಿಣದ ಕಠೋರತೆ ಸೇರಿಕೊಂಡು ಆತ ಧಡಾರನೆ ನೂಕಿ ಬಾಗಿಲು ತೆರೆದ.

ಕತ್ತಲು ಆವರಿಸಿದ್ದ ತನ್ನ ಗುಡಿಸಿಲಿನಲ್ಲಿ ಹೊರಸಲ ಮೇಲೆ ಮಲಗಿದ್ದ ರಹೀಮಖಾನನಿಗೆ, ಮೂವತ್ತು ವರ್ಷಗಳ ಹಿಂದೆ ನಡೆದದ್ದೆಲ್ಲವೂ ಮಿಂಚಿನಂತೆ ಹೊಳೆದು ಹೋಯಿತು. ತನ್ನೆಲ್ಲ ಸೇಡನ್ನು ಆತ ತೀರಿಸಿಕೊಳ್ಳಲಿಲ್ಲವೆ? ಮೂವತ್ತು ವರ್ಷಗಳ ಕಾಲ ಆತ ತನ್ನ ಹೆಂಡತಿಯನ್ನು, ಮಕ್ಕಳನ್ನು ಹಾಗೂ ತನ್ನ ಎತ್ತುಗಳನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಂಡಿದ್ದ. ಹಳ್ಳಿಯ ಎಲ್ಲರ ಜೊತೆ ಜಗಳವಾಡುತ್ತಿದ್ದ. ಹೀಗಾಗಿ ಸಮಾಜದಲ್ಲಿ ಎಲ್ಲರೂ ಅತ್ಯಂತ ದ್ವೇಷಿಸುವ ವ್ಯಕ್ತಿ ತಾನಾಗಿಬಿಟ್ಟ. ಈ ರೀತಿ ಎಲ್ಲರ ಅವಹೇಳನಕ್ಕೆ ತಾನು ಗುರಿಯಾಗಿ ಬಿಟ್ಟೆ ಎಂಬ ವಿಚಾರವೇ ಆತನಿಗೊಂದಿಷ್ಟು ವಿಕೃತ ತೃಪ್ತಿ ನೀಡಿತು.

ಉತ್ಸಾಹದ ಚಿಲುಮೆಯಾಗಿದ್ದ ಹಾಗೂ ಹೃದಯವಂತನಾಗಿದ್ದ ಯುವಕನೊಬ್ಬ ವಿಚಿತ್ರ ಕ್ರೂರ ಮೃಗವಾಗಿ ಪರಿವರ್ತನೆಗೊಳ್ಳಲು ಕಾರಣಗಳೇನು ಎಂಬ ಬಗ್ಗೆ ಆ ಹಳ್ಳಿಯ